

ಅಂದರೆ ಊರಿನಲ್ಲಿರುವಷ್ಟು ಕಾಲ ಆ ಶಂಕರ ಕುಂಬಾಳ್ಕರ್ ಎಂಬ ವಿನೂತನ ನಾಮಧೇಯದ ಬದಲು 'ನಮ್ಮ ಶಂಕರ, ನಮ್ಮ ಶಂಕ್ರಣ್ಣ, ನಮ್ಮ ಶಂಕರಯ್ಯ, ಬೆಟ್ಟಿನ ಮನೆಯ ಶಂಕರಪ್ಪ ಎಂಬ ಸಲುಗೆಯ, ಆತ್ಮೀಯ ಸಂಬೋಧನೆಗಳೇ ಅವರ ಮನಸ್ಸನ್ನು ಮುದಗೊಳಿಸುತ್ತಿದ್ದವು. ಈ ಅರ್ಧಶತಮಾನದಷ್ಟು ದೀರ್ಘ ಅವಧಿಯಲ್ಲಿ ತಾನು ಬೆಳೆಸಿದ ಬಿರುಸಿನ ಉದ್ಯಮದ ವರಿಷ್ಠರಾಗಿ ಅವರನ್ನಾವರಿಸುತ್ತಿದ್ದ ಆಡಂಬರ, ಮಿರಿಮಿರಿ ಪೋಷಾಕು, ಘನಸ್ತಿಕೆ ಎಲ್ಲವೂ ಮಾಯವಾಗಿ ಒಂದು ತುಂಡು ಪಂಚೆ, ತೋಳಿಲ್ಲದ ಬನಿಯನ್ ಮತ್ತು ಹೆಗಲ ಮೇಲೊಂದು ಬೆವರೊರೆಸುವ 'ಟವೆಲ್' ಅವರ ಮೈಮನಸ್ಸನ್ನು ತುಂಬಿಸುತ್ತಿದ್ದವು.

ಬಾಲ್ಯದಲ್ಲಿದ್ದ ಆ ಸರಳತನವನ್ನು ಮಾಯವಾಗಿಸಲೆಂಬಂತೆ ಶಂಕರ ಕುಂಬಾಳ್ಕರ್ ಎಂಬ ಮಾಂತ್ರಿಕ ಶೋಕೀ ಹೆಸರು ಅವರಿಗಂಟಿದ್ದು ಆಕಸ್ಮಿಕವೇನಲ್ಲ. ಉದ್ದೇಶವಿಲ್ಲದೆ ನಡೆದ ನಾಮಕರಣವಲ್ಲ. ಬಡತನದ ಭಾರದಿಂದ ಊರುಬಿಟ್ಟು ಕಾಲುನಡಿಗೆಯಲ್ಲಿಯೇ ನಾಲ್ಕಾರು ದಿನ ನಡೆದು ಮತ್ತೆ ಯಾರೋ ಲಾರಿ ಚಾಲಕರ ಕೃಪೆಯಿಂದ ಒಂದೆರಡು ದಿನ ಅವರು ನೀಡಿದ ಚಹಾ ಕುಡಿತು, ತಿಂಡಿ ತಿಂದು, ಆ ಋಣ ತೀರಿಸಲು ಲಾರಿ ಚಕ್ರ ತೊಳೆದು 'ಮಹಾನಗರಿ'ಯನ್ನು ಸೇರಿದ 'ಕುಂಬಾಳು' ಎಂಬ ಕುಗ್ರಾಮದ ಹುಡುಗ ಕಠಿಣಶ್ರಮದಿಂದ ಸ್ವಂತ ಉದ್ದಿಮೆ ಸ್ಥಾಪಿಸಿ ಹಂತಹಂತವಾಗಿ ಮೇಲೇರಿ ಅದೇ ಊರಿನ ಎಲ್ಲರಿಗೂ ಅಭಿಮಾನದವನಾಗಿ ಬೆಳೆಯುವಲ್ಲಿ 'ಕುಂಬಾಳ್ಕರ್' ಎಂಬ ಹೆಸರಿನ ಆಕರ್ಷಣೆಯೂ ಕೆಲಸ ಮಾಡಿದೆ.

ಒಂದಷ್ಟು ಕಾಲ ಇನ್ನೊಬ್ಬನ ಕೈಕೆಳಗೆ ಕೆಲಸ ಮಾಡುತ್ತ ಒಂದು ದಿನ ಜ್ಞಾನೋದಯವಾದಂತೆ ಬಹಳ ಆಕರ್ಷಕವಾದ ಹಾಲು ಬಿಳುಪಿನ ಕಾರ್ಡಿನಲ್ಲಿ ತನ್ನ ಶಂಕರ ಎಂಬ ಹೆಸರಿನೊಂದಿಗೆ ಊರಿನ ಹೆಸರಿನ ಛಾಯೆಯನ್ನು ಉಳಿಸಿಕೊಂಡು ಅದಕ್ಕೊಂದು 'ಕರ್' ಎಂಬ ವಿನೂತನ ವಿಶೇಷಣವನ್ನು ಅಂಟಿಸಿ ಆ ಮಹಾನಗರಿಯ ವ್ಯಾಪಾರೀ ಬೀದಿಗಳಲ್ಲಿ ತನ್ನ ಚಾಕಚಕ್ಯತೆಯ ಮಾತಿನೊಂದಿಗೆ ವಿಸಿಟಿಂಗ್ ಕಾರ್ಡು ನೀಡಿ ವ್ಯವಹಾರದ ಸಂಬಂಧ ಬೆಳೆಸಿದ್ದೆಲ್ಲ ಈಗ ಇತಿಹಾಸ.

ಏನಿತ್ತು ಕುಂಬಾಳ್ ಎಂಬ ಕುಗ್ರಾಮವನ್ನು ತೊರೆದ ಹರಕು ಚಡ್ಡಿಯ ಹುಡುಗನಲ್ಲಿ! ಇದ್ದದ್ದು ಹೋರಾಡುವ ಮನಸ್ಸು ಮತ್ತು ಹುಮ್ಮಸ್ಸು. ಚಂಡೆ ಬಾರಿಸಿದಂತೆ ಮಾತನಾಡುವ ಪ್ರಾವೀಣ್ಯ. ತನ್ನ ತೀರ ಖಾಸಗೀ ಆತ್ಮೀಯರೊಡನೆ ಅವರು ಹೇಳಿದ ಒಂದು ಸಂಗತಿ ಕೈಯಲ್ಲಿ ಕಾಸಿಲ್ಲ, ಬಾಡಿಗೆ ಬಿಳಿ ಪ್ಯಾಂಟು ಶರ್ಟು ಬೂಟು ಧರಿಸಿ ಒಂದು ಅಂಗಡಿಯವರು ತನ್ನ ವಿಸಿಟಿಂಗ್ ಕಾರ್ಡಿನ ಆಕರ್ಷಣೆಯಿಂದ ನೀಡಿದ ವಸ್ತುಗಳನ್ನೆಲ್ಲ ಮಹಾನಗರಿಯಲ್ಲಿ ಇನ್ನೊಂದು ಭಾಗದ ಮನೆಗಳಿಗೆ ಮಾರಿ ಬಂದ ಲಾಭವನ್ನು ಕಿಸೆಗೆ ಹಾಕಿ ನಂಬಿಕೆ ಉಳಿಸಿ ಉದ್ದಿಮೆ ಸ್ಥಾಪಿಸಿದವ ತಾನು ಎಂದು.

ಶಂಕರ ಕುಂಬಾಳ್ಕರ್ ಅವರ ಇಂದಿನ ಸ್ಥಿತಿಗತಿ ಗಮನಿಸಿದರೆ ಇದೆಲ್ಲ ಒಂದು ಪವಾಡದಂತೆ ತೋರೀತು. ಆ ಕುರಿತು ತಲೆಕೆಡಿಸಿಕೊಳ್ಳುವವರೂ ಅವರಲ್ಲ. ಯಾರೇ ಯುವಕರು ತಮ್ಮ ಬಳಿಗೆ ಬಂದಾಗಲೆಲ್ಲ ಅವರು ಹೇಳುವ ಒಂದು ಮಾತಿದೆ – 'ನೋಡಪ್ಪಾ, ನಿನ್ನ ಜೀವನದಲ್ಲಿಯೂ ಪವಾಡ ನಡೆದೀತು. ಸುಮ್ಮನಿರಬೇಡ. ಏನಾದರು ಮಾಡುತ್ತಿರು' ಎಂದು. 'ತಾನೂ ಏನೇನೋ ಮಾಡಿ ಮತ್ತು ಪವಾಡವನ್ನು ನಂಬಿಯೇ ಮೇಲೆ ಬಂದದ್ದು' ಎಂದು.

ಪವಾಡ? ಹೌದು. ಅವರೇ ಹೇಳುವಂತೆ ಆ ವಿಸಿಟಿಂಗ್ ಕಾರ್ಡಿನಲ್ಲಿ ತನ್ನ ಹುಟ್ಟಿದೂರಿನ ಹೆಸರನ್ನು ವಿನೂತನಗೊಳಿಸಿದ್ದೇ ಆ ಪವಾಡ.

ಆ ಪವಾಡಕ್ಕೆ ಅವರ ಬಲವಾದ ನಂಬಿಕೆಯಂತೆ ಆಧಾರವಾಗಿರುವುದು ಅವರೂರಿನ ದೈವ–ದೇವರು. ಅಷ್ಟರಮಟ್ಟಿಗೆ ಅವರು ಆಸ್ತಿಕ. ಹಾಗೆಂದು ಮಹಾನಗರಿಯ ಸಮುದ್ರದ ಗಾಳಿಗೆ ಮುಖ ಮಾಡಿರುವ ತನ್ನ ವಿಶಾಲವಾದ ಬಂಗಲೆಯಲ್ಲಿ ಅವರೇನು ಗಂಟೆಗಟ್ಟಲೆ ಪೂಜೆ ಹೋಮ ಹವನ ನಡೆಸುವುದಿಲ್ಲ. ಇವತ್ತು ಈ ದೇವಸ್ಥಾನ, ನಾಳೆ ಆ ದೈವಸ್ಥಾನ ಎಂದೆಲ್ಲಾ ಹರಕೆ ಹೊತ್ತು ದರ್ಶನ, ಪರ್ಯಟನದಲ್ಲಿ ಕಾಲ ಕಳೆಯುವ ಕ್ರಮವೂ ಇಲ್ಲ. ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಒಂದಷ್ಟು ಹೊತ್ತು ಓದಿಗೆ, ಇನ್ನುಳಿದಂತೆ ಬಹು ಹೊತ್ತು ಉದ್ದಿಮೆಯ ಆಡಳಿತಕ್ಕೆ. ಭಾನುವಾರದಂದೂ ತನ್ನ ಕಚೇರಿಗೆ ಹೋಗಿ ಕಾಗದ ಪತ್ರ ಕಡತಗಳನ್ನು ಪರಿಶೀಲಿಸಿ ಮರುದಿನದ ಕಾರ್ಯಕಲಾಪಗಳಿಗೆ ಅಣಿಗೊಳಿಸುವ ಪರಿಪಾಠ ಅವರದು. ಅವರ ವಿಶ್ರಾಂತಿಯ ಸಮಯ ಮತ್ತಾವುದೂ ಅಲ್ಲ, ಅದೇ ಹುಟ್ಟಿದೂರಿಗೆ ಬಂದು ಇರುವಷ್ಟು ಕಾಲ.

ವಿಶ್ರಾಂತಿ ಎಂದರೆ? ಊರಿನ ಯಾರೋ ಬಂಧುಗಳ ಮನೆಯಲ್ಲಿ ಉಂಡು ತೇಗಿ ಚಾವಡಿಯಲ್ಲಿ ದಿಂಬಿಗೊರಗಿ ಗೊರಕೆ ಹೊಡೆಯುವುದು ಎಂದಲ್ಲ. ಮಹಾನಗರಿಯಲ್ಲಿ ಶಂಕರ ಕುಂಬಾಳ್ಕರ್ ಆಗಿ ಭಾರೀ ಬಂಡವಾಳ ಹೂಡಿಕೆಯ ಉದ್ದಿಮೆಯನ್ನು ವಿಸ್ತರಿಸುವ ಶಕ್ತಿಯೋ ವ್ಯಕ್ತಿಯೋ ಊರಿಗೆ ಬಂದರೆ ಕ್ಷಣವೂ ಬಿಡುವಿಲ್ಲದೆ ತನ್ನನ್ನು ತೊಡಗಿಸಿಕೊಳ್ಳುವುದು ಊರಿನ ವಿಕಾಸದ ಕ್ಷೇತ್ರದಲ್ಲಿ.

ಅಷ್ಟು ಅಭಿಮಾನ ಅವರಿಗೆ ತನ್ನ ಹುಟ್ಟೂರಿನ ಮೇಲೆ. ತವರಿನ ಅಭಿವೃದ್ಧಿಯ ಬಗೆಗೆ. ತನ್ನ ಬಾಲ್ಯದ ಕಷ್ಟದ ದಿನಗಳಲ್ಲಿದ್ದಂತೆ ಊರು ಬಡವಾಗಿರಬಾರದೆಂಬುದೇ ಅವರ ಕನಸು.

ಈ ಹತ್ತಾರು ವರ್ಷಗಳಲ್ಲಿ ಊರಿನವರೆಲ್ಲ, ಆ ಊರಿನವರೇ ಎಂದಲ್ಲ ಅಕ್ಕಪಕ್ಕದ ಊರಿನವರೂ ಶಂಕರ ಕುಂಬಾಳ್ಕರ್ ಅವರ ಕನಸಿನ ಬಗೆಗೆ ತಿಳಿದೇ ಅವರಿಂದ ಸಾಕಷ್ಟು ಪ್ರಯೋಜನ ಪಡೆದಿದ್ದಾರೆ. ಎಲಿಮೆಂಟರಿ ಶಾಲೆ ಮಾತ್ರ ಇದ್ದ ಊರಿನಲ್ಲಿ ಈಗ ಕಾಲೇಜು ತಾಂತ್ರಿಕ ವಿದ್ಯಾಲಯಗಳೆಲ್ಲಾ ತಲೆ ಎತ್ತಿವೆ. ಹತ್ತಾರು ಮೈಲಿಗಳಷ್ಟು ದೂರ ಹೋಗಬೇಕಾಗಿದ್ದ ಆಸ್ಪತ್ರೆಯ ಅನುಕೂಲ ಈಗ ಕೂಗಳತೆಯಲ್ಲೇ ಇದೆ.

ಇಷ್ಟು ಮಾತ್ರವೇ? ಆ ಪ್ರಾಂತ್ಯದ ಹತ್ತಾರು ಹಳ್ಳಿಗಳ ಹುಲ್ಲು ಮಾಡಿನ ದೈವ ದೇವರುಗಳ ಗುಡಿಗಳೆಲ್ಲ ಶಿಲಾಮಯವಾಗಿವೆ. ತಾಮ್ರದ